ಮೋಸವಿಲ್ಲ ಎಂದು ತಿಳಿದೇ ಹೋಗುತ್ತಿದ್ದ!

ತರಕಾರಿ ಸಾರುಗಳೆಂದರೆ ಅವನಿಗೆ ಹಿಡಿಸುತ್ತಲೇ ಇರಲಿಲ್ಲ. ತನ್ನ ಮನೆಯ ಸಾರು ಅತ್ತತ್ತ! ಯಾವತ್ತಾದರೂ ಮನೆಯ ಸಾರಿಗೆ ಮಾವಯ್ಯ ಕೂಗಾಡಿದರೆ ಬೇಸತ್ತ ಹೆಂಡತಿ ಮೆಣಸಕ್ಕ ತನ್ನ ಮನೆಯ ಸಾರನ್ನೇ ತೆಗೆದುಕೊಂಡು ಹಾಗೆ ಹೋಗಿ ಹೀಗೆ ಬಂದು ನೆರೆಮನೆ ಸಾರೆಂದು ಬಡಿಸಿದರೆ 'ನೋಡ್ದಾ ನೀನೂ ಇದೀಯಾ, ಪಕ್ಕದ ಮನೆ ಸಾರು ಎಂಗಿದ್ದದು' ಎಂದು ಚಪ್ಪರಿಸುತ್ತ ಉದಕ ಮಾವಯ್ಯ ಹೊಗಳಿದರೆ ಹೆಂಡತಿ ಮೆಣಸಕ್ಕ ಮೂತಿ ತಿರುವುತ್ತಿದ್ದಳು!

ಉದಕದ ಆಸೆ ತೀರಿಸಿಕೊಳ್ಳಲು ಮಾವಯ್ಯ ಹೂಡುತ್ತಿದ್ದ ಉಪಾಯಗಳೇನು? ಯಾರ ಮನೆಯಲ್ಲಾದರೂ ಕುರಿಯೊ, ಕೋಳಿಯೊ ಕುಯ್ದಿದ್ದಾರೆ ಎಂಬ ಸುಳಿವು ಬಾಡಿನ ಎಸರಿನ ಘಮಲಿನಿಂದ ತಿಳಿದುಬಿಟ್ಟರೆ ಸಾಕು ಮಾವಯ್ಯ ಅವರ ಮನೆ ಮುಂದೆ ಸುಳಿದಾಡುತ್ತಿದ್ದ. ಊರಿಗೇ ಮಾವಯ್ಯನಾದವನನ್ನ ಹಾಗೇ ಹೋಗಲು ಬಿಟ್ಟಾರೆಯೇ? ಬಾಡೂಟಕ್ಕೆ ಉದಕ ಮಾವಯ್ಯನನ್ನು ಆಹ್ವಾನಿಸಿಯೇ ತೀರುತ್ತಾರೆ. ಮಾವಯ್ಯ ದೇಶಾವರಿ ನಗೆ ಬೀರುತ್ತ, 'ಕುರಿ, ಕೋಳಿ ಕುಯ್ತೀವಿ ಅಂದ್ರೆ ಬರಬಹುದು ಇಲ್ಲದಿದ್ರೆ ಯಾಕೊ?' ಅನ್ನುತ್ತಾನೆ. 'ಕುರಿಕೋಳೀನೇ ಕುಯ್ದಿದ್ದೀವಿ ಬಾ ಮಾವ" ಎಂಬ ಅಧಿಕೃತ ಆಹ್ವಾನ ಬರಲು, ಎಲೆಯಡಿಕೆ ಹಾಕಿದ ಸುಲಿಪಲ್ಲ ಸುಂದರಾಂಗ ಮಾವಯ್ಯ ದಯಮಾಡಿಸುತ್ತಾನೆ. ಪರೋಕ್ಷವಾಗಿ ಊಟಕ್ಕೆ ಆಹ್ವಾನಿಸಲ್ಪಟ್ಟ ಮಾವಯ್ಯನಿಂದ ಕುರಿ ಕುಯ್ದ ಮನೆಯವರಿಗೊಂದು ಸಹಾಯವಾಗುತ್ತದೆ. ಬಾಡೂಟಕ್ಕೆ ಮುತ್ತಗದೆಲೆಯೇ ಚಂದ. ಆ ದಿನಗಳಲ್ಲಿ ಬಯಲು ಸೀಮೆಯ ಮೈದಾನಗಳಲ್ಲಿ ಬೇಕಾದಷ್ಟು ಮುತ್ತುಗದ ಗಿಡಗಳಿರುತ್ತಿದ್ದವು. ಆ ಮನೆಯವರು ತಾವು ಸಂಗ್ರಹಿಸಿದ ಮುತ್ತುಗದೆಲೆಯ ಪಿಂಡಿಗಳನ್ನು ತಂದು ಮಾವಯ್ಯನ ಮುಂದೆ ಹಾಕುತ್ತಾರೆ. ಮಾವಯ್ಯ ಎಲ್ಲರ ಊಟಕ್ಕಾಗುವಷ್ಟು ಊಟದೆಲೆ ಮತ್ತು ದೊನ್ನೆಗಳನ್ನು ಹಚ್ಚಿ ಬಿಡುತ್ತಾನೆ. ಅಡಿಗೆಯಾದ ಮೇಲೆ ಹೊಟ್ಟೆ ಬಿರಿಯಾ ಊಟ ಮಾಡಿ, ಮತ್ತೊಂದು ಮನೆಯ ಮಾಂಸದೂಟದ ಬೇಟೆಗೆ ಮಾವಯ್ಯ ಹೊರಡುತ್ತಾನೆ. ಹೀಗೆ ಬಾಡಿನ ವಾಸನೆ ಬಂದ ಮನೆಗಳಿಗೆ ಒಂದಿಲ್ಲೊಂದು ನೆಪದಿಂದ

